ಇಳಿದವಳು ಒಬ್ಬಳು ಮುದುಕಿ. ಮೈತುಂಬ ಶಾಲನ್ನು ಹೊದೆದು ಹೆಗಲಲ್ಲಿ ವ್ಯಾನಿಟಿ ಬ್ಯಾಗನ್ನು ನೇತುಹಾಕಿಕೊಂಡು ಕೈಯ್ಯಲ್ಲಿ ಒಂದು ತುಂಬಿದ ಚೀಲವನ್ನು ಹಿಡಿದುಕೊಂಡು ಇಳಿದು ಆಟೋದವನಿಗೆ ಹಣ ಪಾವತಿ ಮಾಡಿ ಹಾಗೆಯೇ ನಿಂತವಳನ್ನು ನೋಡಿದರೆ ಯಾರೋ ಹೊಸಬರು ಎನ್ನಿಸಿತು. ತಮ್ಮ ಮನೆಗೆ ಬಂದವರಂತೂ ಇರಲಿಕ್ಕಿಲ್ಲ ಎಂದುಕೊಂಡವನಲ್ಲಿ ಒಂದು ವಿಚಿತ್ರ ಕುತೂಹಲ ಮೂಡಿತು. ಪೇಪರು ಓದಲು ಸುರು ಮಾಡಬೇಕೆನ್ನುವ ತೀವ್ರ ಬಯಕೆಯ ಹೊರತಾಗಿಯೂ ಆಕೆಯನ್ನೇ ಗಮನಿಸತೊಡಗಿದ.

ಆಟೋದವ ಮಾತ್ರ ತಾನು ಕೇಳಿದಷ್ಟು ದುಡ್ಡು ಕೈಗೆ ಬಂದದ್ದೇ ಅಲ್ಲಿಂದ ಬರ‍್ರೆಂದು ಶಬ್ದ ಮಾಡುತ್ತ ಹೊರಟೇ ಹೋಗಿದ್ದ. ಅವ ಹೋದ ಮೇಲೆಯೂ ಅಲ್ಲಿಯೇ ನಿಂತು ಆಚೀಚೆ ನೋಡುತ್ತಿದ್ದ ಆಕೆಯನ್ನು ಗಮನಿಸಿದ ಇವನಿಗೆ ಆಕೆ ಇಲ್ಲಿಗೆ ಹೊಸಬಳೇ ಎಂಬುದು ಖಾತ್ರಿಯಾಯ್ತು. ಇವ ಹಾಗೆ ನೋಡುತ್ತಿದ್ದಂತೆಯೇ ಆಕೆ ಅಲ್ಲೇ ಎದುರಿನ ಅಡ್ಡ ರಸ್ತೆಯೊಂದರಲ್ಲಿ ತಿರುಗಿ ತುಸು ದೂರ ನಡೆದಳು. ಅಕ್ಕ ಪಕ್ಕದ ಮನೆಗಳತ್ತ ಮತ್ತು ನಡು ನಡುವೆ ಇದ್ದ ಚಿಕ್ಕ ಚಿಕ್ಕ ಅಂಗಡಿಗಳ ಬೋರ್ಡುಗಳತ್ತ ನೋಡುತ್ತ ಮುಂದೆ ಹೋದವಳು ತುಸುವೇ ಹೊತ್ತಿನಲ್ಲಿ ಹಿಂದೆ ತಿರುಗಿ ಮುಖ್ಯ ರಸ್ತೆಗೆ ಪುನಃ ಬಂದು ತುಸುವೇ ದೂರದಲ್ಲಿದ್ದ ಇನ್ನೊಂದು ಅಡ್ಡ ರಸ್ತೆಗೆ ತಿರುಗಿದಳು. ಅಲ್ಲಿಯೂ ಅವಳಿಗೆ ಬೇಕಾದ ಮನೆ ಸಿಗಲಿಲ್ಲವೇನೋ. ತಿರುಗಿ ಮುಖ್ಯ ರಸ್ತೆಗೇ ಬಂದಳು. ಇವ ನೋಡುತ್ತಲೇ ಇದ್ದ. ತಲೆ ಸುತ್ತ ಹೊದ್ದುಕೊಂಡ ಶಾಲು ತುಸು ತುಸುವಾಗಿ ಜಾರುತ್ತಿದ್ದುದು ಈಗ ಇಡೀ ತಲೆ ಮತ್ತು ಮುಖ ತೋರುವಷ್ಟು ಜಾರಿತ್ತು. ತಲೆ ಕೂದಲು ಹಣ್ಣಾಗಿತ್ತು. ಮುಖ ತುಸು ನೆರಿಗೆ ಕಟ್ಟಿತ್ತು.

ಇನ್ನೂ ಕೈಯ್ಯಲ್ಲಿಯೇ ಹಿಡಿದುಕೊಂಡಿದ್ದ ಕಾಗದಗಳ ಕಟ್ಟನ್ನು ಬಿಡಿಸಿ ಬಿಡಿಸಿ ನೋಡಿದಳು. ಬಹುಶಃ ಬರೆದುಕೊಂಡು ಬಂದಿದ್ದ ವಿಳಾಸವನ್ನು ಹುಡುಕುತ್ತಿದ್ದಿರಬೇಕು ಎನ್ನಿಸಿತು ಇವನಿಗೆ. ಆದರೆ, ಎಷ್ಟು ಬಾರಿ ಆ ಕಾಗದಗಳನ್ನು ತಿರುಗಿಸಿ ನೋಡಿದರೂ ಆಕೆಗೆ ಬೇಕಾದದ್ದು ಸಿಕ್ಕ ಹಾಗೆ ಕಾಣಲಿಲ್ಲ. ಅಷ್ಟು ದೂರದಿಂದಲೂ ಅವನಿಗೆ ಆಕೆಯ ಮುಖದ ಮೇಲಿನ ನಿರಾಸೆ ಕಾಣಿಸುತ್ತಿತ್ತು. ಆ ನಿರಾಸೆ ಹಾಗೆಯೇ ಗಾಬರಿಯಾಗಿ, ಗಾಬರಿ ಗೊಂದಲವಾಗಿ ಬದಲಾಗಿದ್ದೂ ಕಾಣಿಸಿತು. ಈಗ ಶಾಂತಾರಾಮನಿಗೆ ಪೇಪರು ಓದಬೇಕೆನ್ನುವ ಇರಾದೆ ಪೂರ್ತಿಯಾಗಿ ಮಾಯವಾಯ್ತು. ಎಲ್ಲಿಗೆ ಹೋಗುವುದು, ಯಾವ ದಾರಿ ಹಿಡಿಯುವುದು ಎನ್ನುವ ಗೊಂದಲಕ್ಕೊಳಗಾದ ಆ ವಯಸ್ಸಾದ ಹೆಂಗಸೇ ಇವನ ಮನಸ್ಸನ್ನೆಲ್ಲ ಆವರಿಸಿದಳು. ಬಹುಶಃ ಹತ್ತಿಪ್ಪತ್ತು ವರ್ಷಗಳ ಹಿಂದೆ ಸತ್ತ ತನ್ನ ತಾಯಿಯ ನೆನಪಾಗಿರಲಿಕ್ಕೂ ಸಾಕು.

ಹಾಗೆಯೇ ನೋಡುತ್ತ ಕುಳಿತವನಿಗೆ ಅದೇನೆನ್ನಿಸಿತೋ. ಎದ್ದು ಹೋಗಿ ಆಕೆಗೆ ಏನಾದರೂ ಸಹಾಯ ಮಾಡುವ ಎಂದು ಇನ್ನೇನು ಹೊರಟೇ ಬಿಡುವವನಿದ್ದ. ಅಷ್ಟರಲ್ಲಿ ಆಕೆಯೇ ರಸ್ತೆಯನ್ನು ದಾಟಿಕೊಂಡು ಇವನ ಮನೆಯತ್ತಲೇ ಬರತೊಡಗಿದಳು ಮತ್ತು ಬೀಗವನ್ನೇನೂ ಹಾಕಿರದ ಇವನ ಮನೆಯ ಗೇಟನ್ನು ತಾನೇ ತೆರೆದುಕೊಂಡು ಇವನ ಕಾಂಪೌಂಡಿನೊಳಗೆ ಬಂದೇ ಬಿಟ್ಟಳು. ಹಾಗೆ ಬಂದವಳು ಇವ ಕುಳಿತಿದ್ದ ವರಾಂಡಾದ ಮೆಟ್ಟಿಲ ಬಳಿಯಲ್ಲಿ ನಿಂತು ಕೈಯ್ಯಲ್ಲಿದ್ದ ಆಗಲೇ ಮುದ್ದೆಯಾಗಿದ್ದ ಕಾಗದಗಳ ಮಡಿಕೆಯನ್ನು ಇವನೆಡೆಗೆ ಚಾಚುತ್ತ, 'ನೋಡಿ ಈ ವಿಳಾಸ ಎಲ್ಲಿ ಬರುತ್ತದೆ ಸ್ವಲ್ಪ ನೋಡಿ ಹೇಳಿ. ಆ ಆಟೋದವನಿಗೆ ಕೇಳಿದರೆ 'ಇಲ್ಲಿಯೇ ಎಲ್ಲೋ ಇದೆ ನೀವೇ ನೋಡಿಕೊಳ್ಳಿ' ಎಂದು ಹೇಳಿ ಹೋಗಿಯೇ ಬಿಟ್ಟ'.

ಇವ ಆಕೆಗೆ ಉತ್ತರಿಸುವ ಮೊದಲೇ ಒಳಗಿನಿಂದ ಹೆಂಡತಿ ಶ್ಯಾಮಲೆ ಕೈಯ್ಯಲ್ಲಿ ರಂಗೋಲಿ ಪುಡಿಯ ತಟ್ಟೆಯನ್ನು ಹಿಡಿದುಕೊಂಡು ಬಂದಿದ್ದಳು. ಇದು ಅವಳ ಮಾಮೂಲಿ ಕೆಲಸ. ಇವ ಪೇಪರು ಓದಲು ಪ್ರಾರಂಭಿಸುತ್ತಿದ್ದಂತೆಯೇ ಅವ ಕುಳಿತಿರುತ್ತಿದ್ದ ವರಾಂಡದ ಎದುರಿಗಿನ ಜಾಗದಲ್ಲಿ ರಂಗೋಲಿ ಹಾಕುವುದು. ಹಬ್ಬದ ದಿನಗಳಲ್ಲಿ ಅಲ್ಲಿಂದ ಗೇಟಿನ ವರೆಗೂ ಬಣ್ಣ ಬಣ್ಣದ ರಂಗೋಲಿಗಳನ್ನು